

# ಜೀವನದ ಸಾರ್ಥಕತೆಗೆ ನೆರವಾಗುವ ನುಡಿಮುತ್ತುಗಳು.

- ಗುರು ಎಂದರೆ ವ್ಯಕ್ತಿಯಲ್ಲ, ಒಂದು ಶಕ್ತಿ, ಅಜ್ಞಾನದ ಕತ್ತಲೆಯ ಕಳೆದು ಸುಜ್ಞಾನದೆಡೆಗೆ ಕರೆದುಕೊಂಡು ಹೋಗುವ ಶಬ್ದವೆ ಗುರು.
- ವಿವೇಕಿಯ ನಾಲಿಗೆ ಅವನ ಹೃದಯದಲ್ಲಿರುತ್ತದೆ. ಅವಿವೇಕಿಯ ಹೃದಯ ಅವನ ನಾಲಿಗೆಯಲ್ಲಿರುತ್ತದೆ.
- ಜಾಣತನವನ್ನು ಬಚ್ಚಿಟ್ಟುಕೊಳ್ಳುವುದೇ, ಜಾಣತನದ ಮೊದಲ ಜಾಣತನ.
- ಪರಿಸ್ಥಿತಿಯನ್ನು ಸರಿಯಾಗಿ ಅರ್ಥೈಸಿಕೊಳ್ಳುವುದಕ್ಕೆ ಕೋಪ ಮತ್ತು ಅಸಹನೆ ದೊಡ್ಡ ಶತ್ರುಗಳು.
- ನಮ್ಮ ಆಲೋಚನೆಗಳೇ ನಮ್ಮನ್ನು ರೂಪಿಸುತ್ತವೆ, ಆದ್ದರಿಂದ ಏನನ್ನು ಯೋಚಿಸುತ್ತಿರೋ ಅದರ ಬಗ್ಗೆ ಎಚ್ಚರವಿರಲಿ.
- ಆತಂಕ ಎಂಬುದು ನಾಳಿನ ಸಮಸ್ಯೆಗಳನ್ನು ದೂರ ಮಾಡುವುದಿಲ್ಲ, ಬದಲಿಗೆ ಇಂದಿನ ಶಾಂತಿಯನ್ನು ಕಸಿದುಕೊಳ್ಳುತ್ತದೆ,
- ಕೋಪವನ್ನು ಪ್ರೀತಿಯಿಂದ, ಪಾಪವನ್ನು ಸದಾಚಾರದಿಂದ, ಸುಳ್ಳನ್ನು ಸತ್ಯದಿಂದ ಗೆಲ್ಲಬೇಕು.
- ಮುಂದಿನ ಹೆಜ್ಜೆ ಇಡಲು ಹೆದರಬೇಡಿ ಬದಲಾಗಿ ಜಡವಾಗಿ ನಿಲ್ಲುವುದರ ಬಗ್ಗೆ ಭಯಪಡಿ.
- ಉತ್ಸಾಹವೆಂಬುದು ಕಲ್ಲಿದ್ದಲ ಒಳಗಿನ ಕಾವಾಗಬೇಕೇ ಹೊರತು ಹುಲ್ಲಿಗೆ ಹತ್ತಿದ ಬೆಂಕಿಯಾಗಬಾರದು.
- ಕೆಲಸವಿಲ್ಲದೆ ಸೋಮಾರಿಯಂತೆ ಕಾಲ ಕಳೆಯುವುದು ಕಳ್ಳತನ ಮಾಡಿದಂತೆ.
- ಆತ್ಮವಂಚನೆ ಮಾಡಿಕೊಂಡು ಗೆಲ್ಲುವುದಕ್ಕಿಂತ ಗೌರವದಿಂದ ಸೋಲುವುದು ಒಳ್ಳೆಯದು.

ಶ್ರೀಮತಿ ಆಶಾ ಮುನಿರಾಜ್

# ನಗೆಯು ಬರುತಿದೆ  ಎನಗೆ

ನಗೆಯು ಬರುತಿದೆ ಎನಗೆ ನಗೆಯು ಬರುತಿದೆ
ಜಗದೊಳಿರುವ  ಮನುಜರೆಲ್ಲಿ
ಹಗರನ ಮಾಡುವುದು ಕಂಡು

ಪರರ ವನಿತೆ  ಒಲುಮೆಗೊಲಿದು
ಹರ್ಷದಿಂದ  ಅವಳ  ಬೆರೆತು
ಹರಿವ  ನೀರಿನೊಳಗೆ ಮುಳುಗಿ
ಬೆರಳ ಎಣಿಸುತಿಹರ ಕಂಡು

ಪತಿಯ ಸೇವೆಯ ಬಿಟ್ಟು
ಪರಪತಿಯ ಕೂಡಿ ಸತತ
ಮೈಯ ತೊಳೆದು ಹಲವು
ವ್ರತವ ಮಾಡ್ದ ಸತಿಯ ಕಂಡು

ಹೀನಗುಣವ ಮನದೊಳಿಟ್ಟು
ತಾನು ವಿಷದ ಹುಂಜನಾಗಿ
ಸ್ವಾಮಿ ಪುರಂದರ ವಿಠ್ಠಲನ
ನಾಮ ನೆನೆಯುವರಕಂಡು

ಶ್ರೀಮತಿ ರೇಣುಕಶಿವರಾಜ್
(ಕನ್ನಡ ಶಿಕ್ಷಕಿ)



# ಗುಡಿಸಲ ಗುಲಾಬಿ ಗುಡಿಯಲಿರೋ ದೇವರು

ಉಂಡ ನಿನಗೆ ಹಸಿದ ನಾನು ಏನ್ ಕೇಳಲಿ?
ಸಾವಿನ ಮನೆಯಲಿ ನಿಂತು ಜೀವದ ಭಿಕ್ಷೆ ಕೇಳಲ?
ಇಲ್ಲ ಮುಳ್ಳು ಮೆತ್ತಿದ ಜೀವನದಲ್ಲಿ ಸುಪ್ಪತ್ತಿನ ಹಾಸಿಗೆ ಕೇಳಲ
ಚಾಹೆ ಇಲ್ಲದೆ ಕಳೆದ ಎಸ್ಟೊ ರಾತ್ರಿಗಳು
ಗುಡಿಸಲ ಒಳಗಡೆ ನಿಂತು ಛತ್ರಿ ಹಿಡಿದ ಮಳೆಗಾಲಗಳು
ಹೊಗೆಯಲಿ ಹತ್ತಾರು ವರ್ಷ ಬೆಂದ ಕಣ್ಣುಗಳು
ಬೆಳಕಿಲ್ಲದೆ ಓದುಗಳು --------ಇದೆಲ್ಲದಕ್ಕು ಸುಂಕ ಕಟ್ಟಿ ಸೋತ ಬಾಲ್ಯ.
ಕಳೆದ ದಿನಗಳ ಮರ್ಮದ ಬಗ್ಗೆ ಕೇಳಲ
ಉಳಿದ ದಿನಗಳ ಕರ್ಮದ ಬಗ್ಗೆ ಕೇಳಲ ಕಾಣದ ಕಣ್ಣು ನೀನು
ಉಂಡ ನಿನಗೆ ಹಸಿದ ನಾನು ಏನ್ ಕೇಳಲಿ
ಗುಡಿಸಲ ಗುಲಾಬಿ ನಾನು ಗುಡಿಲಿರೋ ದೇವರು ನೀನು



ಶ್ರೀಮತಿ ರೇಣುಕಶಿವರಾಜ್
(ಕನ್ನಡ ಶಿಕ್ಷಕಿ)



# ಅಮ್ಮ

ನೀನೆ ನನಗೆ ಅಚ್ಚುಮೆಚ್ಚು

ತಾಯಿಯ ಮಮತೆ  ಮಕ್ಕಳಿಗೆ  ತುಂಬ ಮುಖ್ಯ.

ಅಮ್ಮ ನಮ್ಮನ್ನು

ಈ ಜಗತ್ತಿಗೆ ಸ್ವಾಗತಿಸಿದ್ದಾಳೆ.

ಅಮ್ಮ ನಮ್ಮನ್ನು ಎಲ್ಲಾರಿಗಿಂತ ತುಂಬ ಪ್ರೀತಿಸುತ್ತಾರೆ.

ಅಮ್ಮ ನಮ್ಮನ್ನು ಸುರಕ್ಷಿತವಾಗಿ ನೊಡಿಕೋಳ್ಳುತ್ತಾರೆ.

ಅಮ್ಮ ನಮ್ಮ ಮೊದಲನೆಯ ಬಂಧು  ಹಾಗೂ  ಗೆಳೆತಿ.

ನಮ್ಮ ಜೀವನವನ್ನು ನಡೆಸೊದಕ್ಕೆ ಅಮ್ಮ ಮುಖ್ಯ.

ಅಮ್ಮ ಎಂದರೆ ಮಾತೃದೇವೋಭವ.

ಸೃಷ್ಟಿ  ಮತ್ತು  ಶ್ವೇತ

ನಾಲ್ಕನೆ ತರಗತಿ



# ಭರವಸೆಯ ಹೊಂಗಿರಣ

ಪ್ರತಿದಿನ ಕತ್ತಲೆ ಕಳೆದು

ಹುಟ್ಟಿಬರೋ ಆ ಸೂರ್ಯ

ಒಂದು ದಿನ ನಿಮಗೆಂದೆ ಉದಯಿಸುವ,

ಅವನು ಚೆಲ್ಲುವ ಹೊಂಗಿರಣಗಳ  ಮೂಲಕ

ನಿಮ್ಮ ಬದುಕಿನಲ್ಲಿ ಹೊಸ

ಆಸೆ, ಭರವಸೆಗಳನ್ನು

ಚಿಗುರಿಸುವ,

ಆ ದಿನ ಎಂದು ಬರುವುದೋ ನಿರ್ಧರಿಸಲಾಗದು

ಆದರೆ ನಿಮಗಾಗಿ ಬಂದೆ ಬರುವುದು..............

ಶ್ರೀಮತಿ ಆಶಾಮುನಿರಾಜ್

ಕನ್ನಡ ಶಿಕ್ಷಕಿ





# ಅಪ್ಪ

ಸಾವಿರ  ಕುದುರೆಗಳ  ಏರುವಾಸೆಯಲಿ
ಆಕಾಶ ಭೂಮಿಯಷ್ಟು ಪ್ರೀತಿ ಕೊಟ್ಟು
ಸಾವಿರ  ಸಲ ಸೋತರೂ
ಛಲದಿಂದ ಬದುಕಿ
ಅವಸರದ ಆಕರ್ಷಣೆಗೆ ಸಿಲುಕಿ
ಪತಂಗವಾಗಿ ಸುಟ್ಟುಹೋದ
ನನ್ನಪ್ಪ ಕಾಣುತ್ತಾನೆ ನನಗೆ
ಪ್ರತಿಸಲವೂ ಸವಾಲುಗಳು ಎದುರು ನಿಂತಾಗ
ಉತ್ತರಿಸಲಾಗದ ನನ್ನ ಪ್ರಶ್ನೆಗಳಿಗೆ
ಮೌನವಾಗುತ್ತಿದ್ದ ಅಪ್ಪನಂತೆ
ನಾನೀಗ ನನ್ನ ಮಗಳ ಮುಂದೆ!
ಬದುಕು ಪ್ರೀತಿಯ ಕಲಿಸಿ
ಇದ್ದಷ್ಟು ದಿನ ಬದುಕಿನ ಹೋರಾಟದಲ್ಲೇ ಕಳೆದೆ
ಅಪ್ಪ ನೀನಂದು ಪ್ರಶ್ನೆಯಾಗಿದ್ದೆ,
ಇಂದು ನಾನು ಹುಡುಕುತ್ತಿದ್ದೇನೆ
ಆ ಪ್ರಶ್ನೆಗಳಿಗೆ ಉತ್ತರ

ಶ್ರೀಮತಿ ರೇಣುಕಶಿವರಾಜ್

(ಕನ್ನಡ ಶಿಕ್ಷಕಿ)

# ಪದಬಂಧ



# ಪ್ರಶ್ನೇಗಳು

ಎಡದಿಂದ ಬಲಕ್ಕೆ

೧. ಸಮತಟ್ಟಾದ ಸ್ಥಳದಲ್ಲಿ ನಡೆಯುತ್ತಿರುವ ಯುದ್ಧ (೩)

೩. ನೀರಜೆಗೆ ಮುಪ್ಪೇ ಇಲ್ಲ (೩)

೪. ಮಡಿವಂತರು ಉಪ್ಪರಿಗೆಯ ಮೇಲೆ ವಾಸವಾಗಿದ್ದಾರೆ (೩)

೬. ವಿನಯನಿಗೆ ನಾಶವೇ ಇಲ್ಲ (೪)

೭. ಕುತೂಹಲದಿಂದ ಕಾಯುತ್ತಿರುವ ವ್ಯಕ್ತಿಯನ್ನು ಈ ಪಕ್ಷಿಗೆ ಹೋಲಿಸುತ್ತಾರೆ (೪)

೯. ಕನ್ನಡ ಓದಲು ಧರಿಸಿರುವ ಚಾಳೀಸು (೪)

೧೧. ಪಂಜರದಲ್ಲಿರುವ ಹಕ್ಕಿಯಂತೆ ಕಾಣುತ್ತಿದೆ ನಕ್ಷತ್ರಗಳ ಸಮೂಹ (೪)

೧೫. ಯಾವ ಕಡೆಯಿಂದ ನೋಡಿದರೂ ದುರಸ್ತಿ ಮಾಡುವುದು ಕಾಣುತ್ತಿದೆ (೩)

೧೬. ಭರದಿಂದ ಹರಿಯಿತ್ತಿದೆ ಲಾವಾರಸ (೩)

೧೭. ಕೆಲಮಂದಿ ಕಾಯಕದಲ್ಲಿ ನಿರತರಾಗಿದ್ದಾರೆ (೩)

ಮೇಲಿಂದ ಕೆಳಕ್ಕೆ

೧. ಸರವನ್ನು ಕೊಳ್ಳಲು ತಮ್ಮ ಪಾಳಿಗಾಗಿ ಕಾಯುತ್ತಾಳೆ (೩)

೨.ರಮೆಯ ಪತಿ (೩)

೩. ದಾನ ಪಡೆಯಲು ಅವಸರವಿಲ್ಲದೆ ಹೋಗಬೇಕು (೩)

೫. ತಲೆಕೆಳಗಾಗಿರುವ ದರ್ಪಣ (೩)

೬. ಲೆಕ್ಕಕ್ಕೆ ಸಿಗದ ಆಕೆಯ ಮುಂಗುರುಳು (೩)

೮. ಕ್ಷಿಪಣಿ ದಿಗಂತದಲ್ಲಿದೆ (೩)

೧೦. ಬರಿದಾಗಿರುವ ಡಬ್ಬಿ (೩)

೧೨. ರಕ್ತ ಹೀರುವ ರಕ್ಕಸ (೩)

೧೩. ಗಣೇಶನಿಗೆ ಪ್ರಿಯವಾದ ಹುಲ್ಲು (೩)

೧೪. ಹೇಗೆ ನೋಡಿದರೂ ಇದು ಸಲ್ಲಾಪವೇ (೩)

ಸ್ಫೂರ್ತಿ. ಎನ್. ಭಟ್ ೮ ನೇ ತರಗತಿ

# ಜೀವ ಉಳಿಸಿ

ಬಾ ಗೆಳತಿ  ಹೋಗುವ



ಗಿಡ ತಂದು ನೆಡುವ

ಕಣ್ಣಲ್ಲಿ ಕಣ್ಣಿಟ್ಟು ಜೋಪಾನ ಮಾಡಿ

ನೀರು ಗೊಬ್ಬರ ಹಾಕಿ ಗಿಡ ಬೆಳಸಿ ಜೀವ ಉಳಿಸುವ

ಮಳೆಯಿಲ್ಲಾ  ಬೆಳೆಯಿಲ್ಲಾ

ಊರ ತುಂಬೆಲ್ಲ ಬರಗಾಲ

ಹಸಿದ ಕಂದನ ತುಟಿಗೆ ಹಾಲಿಲ್ಲಾ

ತಾಯಿ  ಹಾಲಿಗೂನಂಜೇರಿದೆ

ಬಾ  ಗೆಳತಿ ಗಿಡ ಬೆಳಸಿ ಜೀವ ಉಳಿಸುವ

ಕಾಂಕ್ರಿಟ್ ಇಟ್ಟಿಗೆಯ  ಮಹಲು ಬೊಡ

ಓಡಾಡಲು ಮೋಟಾರು ಕಾರು ಬೇಡ

ಗಿಡ ಮರ ವೆಲ್ಲಾ ಕಡಿಮೆ  ರಸ್ತೆ ಮಾಡುವುದು ಬೇಡ

ಬಾ ಗೆಳತಿ ಗಿಡ ಬೆಳೆಸಿ ಜೀವ ಉಳಿಸುವ

ಕುಶಿ.ಬಿ
ಮೂರನೆ ತರಗತಿ
ಎ ವಿಭಾಗ



# ಕೈ ತುತ್ತು

ಕಡಲ ತೀರದ ಮುತ್ತು
ಭಾವದೊಳಗಿನ ಗಮ್ಮತ್ತು
ಸಡಗರದ ಸಿರಿಯ ಅವಲತ್ತು
ಮರಗಳ ಸಾಲಿನ ತಂಪಿತ್ತು
ಇವೆಲ್ಲಕ್ಕೂ ಮಿರಿದ ಸಂಪತ್ತು
ಅಮ್ಮನೀನಿಟ್ಟ ಕೈ ತುತ್ತು

ಅಭಿನಯ
ಏಳನೆ ತರಗತಿ

# ಕಳ್ಳ ಬೆಕ್ಕು

ಬೆಕ್ಕು ಬಂದು ಕದ್ದು ಕದ್ದು
ಹೊಂಚು ಹಾಕಿತು
ಹೊಂಚು ಹಾಕಿ ಸಂಚಿನಿಂದ
ಮನೆಗೆ ನುಗ್ಗಿತು
ಕೆನೆಯ ಹಾಲು ಇರುವ ಪಾತ್ರೆ
ಮನೆಯೊಳಿತ್ತು
ಹಿಗ್ಗಿನಿಂದ  ಕುಡಿಯಲೆಂದು
ಬಾಯಿ ಹಾಕಿತು
ಆಡಿ ಧಣಿದು ಮರಳಿ ಪುಟ್ಟ
ಮನೆಗೆ ಬಂದನು
ಹಾಲು ಕುಡಿವ ಬೆಕ್ಕು ಕಂಡು
ಹೊಡೆವೆನೆಂದನು
ಕದ್ದು ಕುಡಿಯುವ ಬೆಕ್ಕೀ
ಸೊಕ್ಕುಮುರಿವೆನೆಂದನು
ಕೈಯಲೊಂದು ಕೋಲನೆತ್ತಿ
ಆದಕೆ ಬಡಿದನು
ಕಳ್ಳ ತನಕೆ ಬಂದ ಬೆಕ್ಕು

ಏಟು ತಿಂದು ಓಡಿತು

ಕಳ್ಳ ತನವು  ಕೆಟ್ಟದೆಂದು

ಅದಕೆ  ತಿಳಿಯಿತು.

ಗಾನವಿ.ಎ

ಮೂರನೆ ತರಗತಿ ಎ    ವಿಭಾಗ

# ನಾನಾದರೆ

ನಾನು ಹರಿಯುವ ನೀರಾಗಿದ್ದರೆ ಚೆನ್ನ

ನಾನು ಬೆಳೆಯುವ ಮರವಾಗಿದ್ದರೆ ಚೆನ್ನ

ನಾನು ಗಿಡಕೊಡುವ ತಂಪಾದ ಗಾಳಿಯಾಗಿದ್ದರೆ ಚೆನ್ನ

ನಾನು ಶಿಕ್ಷಕರ ಕೈಯಲ್ಲಿರೊ ಬಳಪವಾಗಿದ್ದರೆ ಚೆನ್ನ

ನಾನು ನೆಲದಲ್ಲಿರೊ ಧೂಳಾಗಿದ್ದರೆ ಚೆನ್ನ

ನಾನು ನಮ್ಮ ನಾಡಿನ ಮಣ್ಣಿನಲ್ಲಿರೊ ಚಿಕ್ಕ ಕಲ್ಲಾಗಿದ್ದರೆ ಚೆನ್ನ

ನಾನು ಕವಿಗಳು ಬರೆಯುವ ಕವನದಲ್ಲಿರೊ  ಪದವಾಗಿದ್ದರೆ ಚೆನ್ನ

ನಾನು ಸಂಗೀತದಲ್ಲಿರೊ ಸ್ವರವಾಗಿದ್ದರೆ ಚೆನ್ನ

**ಆದರೆ ನನಗೆ ದೇವರು ಕೊಟ್ಟ ಹೀನ ಮನುಷ್ಯನ ಜನ್ಮ**

**ರಾಹುಲ್.ಬಿ**

**೯ನೇ ತರಗತಿ**

# ನಗೆ ಜೋಕಾಲಿ

ಮನೆಯಲ್ಲಿ ಹೋದರೆ

ಕರೆಂಟು

ಹೇಗೆ ಓದುವುದು

ಸ್ಟೂಡೆಂಟು

ಅದರ ಮಧ್ಯೆ ಸೊಳ್ಳೆ

ನೂರೆಂಟು

ಹೇಗೆ ಬರುವುದು

ಪರ್ಸೆಂಟು

# ನಗೆ ಮಾತುಗಳು

- ಗಣನಾಯಕನಿಗೆ ಪ್ರಿಯವಾದುದು  ಗರಿಕೆ , ಜನನಾಯಕನಿಗೆ ಗೊರಕೆ.

- ಭಾಷಣದಲ್ಲಿ ಹೇಳುತ್ತಾರೆ ಟಿ ವಿ ನಮ್ಮ ವೈರಿ ಮನೆಗೆ ಬಂದು ನೋಡುತ್ತಾರೆ ತಪ್ಪದೆ ಫ್ರೆಂಡ್ಸ್ ವೈರಿ.
- ಕಾ ಕಾ ಅಂದು ಕಾಗೆ ಕೂಗುತ್ತೆ , ಕೂ ಕೂ ಅಂದು ಕೋಗಿಲೆ , ಕೀ ಕೀ ಅಂದು ಕೂಗೋದ್ಯಾರು? ಬೀಗದ ಕೈ ಕಳೆದೋರು.
- ನಕ್ಕರೆ ಹೆಣ್ಣು ದಂತದ ಗೊಂಬೆ, ಅತ್ತರೆ ಅಯ್ಯೋ ಅಗೊಂಬೆ

ದೀಕ್ಷಾ.ಪಿ

೫ ನೇ

ತರಗತ ಎ ವಿಭಾಗ

## ನಗೆ ಹನಿ

ಗುರುಗಳು : ಯಾಕೆ ಇಷ್ಟು ಲೇಟು?

ರಾಜು : ಚಿಹ್ನೆಯಿಂದ ಗುರುಗಳೇ

ಗುರುಗಳು : ಚಿಹ್ನೆ ? ಯಾವ ಚಿಹ್ನೆ ...?

ರಾಜು : ದಾರಿಯಲ್ಲಿ ಬರುವಾಗ ಒಂದು ಚಿಹ್ನೆ ಹೀಗಿತ್ತು ಶಾಲೆ ಇದೆ ನಿಧಾನವಾಗಿ ಚಲಿಸಿ

ಬಾಬು : ಕ್ಯಾರೆಟ್ ಗೆ ಏಕೆ ಹಸಿರು ಬಣ್ಣ ಹಚ್ಚುತ್ತಿರುವೆ ..?

ರಮೇಶ : ನಮ್ಮ ಗುರುಗಳು ನಮಗೆ ಹಸಿರು ಬಣ್ಣದ ತರಕಾರಿಗಳನ್ನು ತಿಂದರೆ ಆರೋಗ್ಯಕ್ಕೆ ಒಳ್ಳೆಯದು ಎಂದು ಹೇಳಿದರು ಅದಕ್ಕೆ.

ಗುರುಗಳು : ಆಲಿ ,ನಿನ್ನ ಕೈ ಬರಹ ತುಂಬಾ ಕೆಟ್ಟದಾಗಿದೆ.

ಆಲಿ : ಪರವಾಗಿಲ್ಲ ,ನಾನು ವೈದ್ಯನಾಗಬೇಕೆಂದು ಆಸೆ ಇದೆ.

ಹೃತ್ವಿಕ್ ಎನ್ ರೆಡ್ಡಿ

೫ ನೆತರಗತಿ (ಎ ವಿಭಾಗ)

# ಜೋಕ್ಸ್

ವ್ಯಾಪಾರಿ : ನೋಡಿ ಮೇಡಂ ಈ ಸೀರೆ ತುಂಬಾ ಚೆನ್ನಾಗಿದೆ.

ಕೀರ್ತಿ : ಒಗೆದರೆ ಸೀರೆ ಕಲರ್ ಹೋಗಲ್ಲ ತಾನೆ ?

ವ್ಯಾಪಾರಿ : ಕಲರ್ ಹೋಗಲ್ಲ ಬಕೆಟ್ ನಲ್ಲೇ ಇರುತ್ತೆ ಮೇಡಂ

ನಿರ್ದೇಶಕ : ನೀವು ಈ ದೃಶ್ಯಕ್ಕೆ ನಾಲ್ಕನೇ ಮಹಡಿಯಿಂದ ಹಾರಬೇಕು.

ನಟ : ಕೈಯೋ ಕಾಲೋ ಮುರಿದು ಹೋದರೆ ....?

ನಿರ್ದೇಶಕ :ಪರವಾಗಿಲ್ಲ ಸಾರ್ , ಇದೇ ಕೊನೆ ದೃಶ್ಯ.

ಧೃವ್

೫ ನೇ ತರಗತಿ

(ಎ ವಿಭಾಗ)

# ಒಗಟುಗಳು

೧. ತಲೆ ಮೇಲೆ ಅರಲು ಬಾಯಲ್ಲಿ ಬೆರಳು

೨. ಊರಿಗೆಲ್ಲಾ ಒಂದೇ ಕಂಬಳಿ

೩. ಬಿಳಿ ಹುಡುಗನಿಗೆ ಕೆಂಪು ಟೋಪಿ

೪. ಮಣ್ಣಲ್ಲೆ ಹುಟ್ಟಿ, ಮಣ್ಣಲ್ಲೆ ಬೆಳೆದು, ಮಣ್ಣಲ್ಲೆ ಸಾಯುವುದು.

೫. ಅರಳುತ್ತೆ ಹೂ ಅಲ್ಲ, ಬಿಸಿಲಿಗೆ ಬಾಡುವುದಿಲ್ಲ.

೬. ಕಪ್ಪೆ ಮುಟ್ಟದ ಕೈಲಾಸ ನೀರು.

**ಉತ್ತರಗಳು :** ೧) ಉಂಗುರ ೨) ಆಕಾಶ ೩) ಬೆಂಕಿಕಡ್ಡಿ ೪) ಮಡಿಕೆ ೫) ಛತ್ರಿ ೬) ಎಳನೀರು

ಕುಸುಮಿತ

೫ನೇ ತರಗತಿ (ಬಿ ವಿಭಾಗ)

## ಒಗಟುಗಳು

೧). ಗೂಡ್ನಲ್ಲಿರೋ ಜೋಡಿ ಪಕ್ಷಿ ಊರೆಲ್ಲಾ ನೋಡುತ್ತೆ.

೨). ಗಿಡ್ಡ ಗುದ್ದಿದರೆ ಮನೆಯಲ್ಲ ಮಕ್ಕಳು.

೩). ಚಿನ್ನದ ಪಟ್ಟಿಗೆಯಲ್ಲಿ ಬೆಳ್ಳಿ ಲಿಂಗ.

೪).ಕೂಗಿದರೆ ರಾವಣ, ಹಾರಿದರೆ ಹನುಮಂತ, ಕೂತರೆ ಮುನಿ.

೫). ಸೂಜಿ ಸಣ್ಣ ,ಕಾಗೆ ಬಣ್ಣ.

೬). ಬಿಳಿ ಹುಲ್ಲಲ್ಲಿ ಕೆಂಪು ಕುರಿಮರಿ.

೭).ಒಂದು ಹಪ್ಪಳ ಊರಿಗೆಲ್ಲಾ ಊಟ.

೮). ಒಂದು ಹಸ್ತಕ್ಕೆ ನೂರೆಂಟು ಬೆರಳು.


೯). ಸಾಗರ ಪುತ್ರ ಸಾರಿನ ಮಿತ್ರ.

೧೦).ಹುಲಿಯ ಚಿಕ್ಕಮ್ಮ , ಇಲಿಯ ಮುಕ್ಕಮ್ಮ.

ಉತ್ತರಗಳು : ೧. ಕಣ್ಣು ೨. ಬೆಳ್ಳುಳ್ಳಿ ೩. ಹಲಸಿನ ಹಣ್ಣಿನ ಬೀಜ ೪. ಕಪ್ಪೆ ೫.ಕೂದಲು

೬. ನಾಲಿಗೆ ೭. ಚಂದ್ರ ೮. ಬಾಳೆಗೊನೆ ೯. ಉಪ್ಪು ೧೦.ಬೆಕ್ಕು

ಚಿನ್ಮಯಿ
೫ನೇ ತರಗತಿ(ಎ ವಿಭಾಗ)



# ಸೋಫಿಯಾ

ವಿಜ್ಞಾನದ ವಿಸ್ಮಯ

ಸೋಫಿಯಾ ಎನ್ನುವುದು ಹಾಂಗ್ ಕಾಂಗ್ ಮೂಲದ ಹ್ಯಾನ್ಸನ್ ರೊಬೊಟಿಕ್ಸ್ ಅಭಿವೃದ್ಧಿಪಡಿಸಿದ ಸಾಮಾಜಿಕ ಹುಮನಾಯ್ಡ್ ರೋಬೋಟ್ ಆಗಿದೆ. ಸೋಫಿಯಾ ಅನ್ನು ಏಪ್ರಿಲ್ 19, 2015 ರಂದು ಸಕ್ರಿಯಗೊಳಿಸಲಾಯಿತು ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನದ ಟೆಕ್ಸಾಸ್ನ ಆಸ್ಟಿನ್ನಲ್ಲಿ ಮಾರ್ಚ್ 2016 ರ ಮಧ್ಯದಲ್ಲಿ ಸೌತ್ವೆಸ್ಟ್ ಫೆಸ್ಟಿವಲ್ (ಎಸ್ಎಕ್ಸ್ಎಸ್ಎಸ್ಎಸ್) ದಲ್ಲಿ ಅವರು ಸಾರ್ವಜನಿಕವಾಗಿ ಮೊದಲ ಬಾರಿಗೆ ಕಾಣಿಸಿಕೊಂಡರು. ಸೋಫಿಯಾವನ್ನು ಜಗತ್ತಿನಾದ್ಯಂತ ಮಾಧ್ಯಮಗಳು ಆವರಿಸಿಕೊಂಡಿದೆ ಮತ್ತು ಹಲವು ಉನ್ನತ-ಪ್ರೊಫೈಲ್ ಇಂಟರ್ವ್ಯೂಗಳಲ್ಲಿ ಭಾಗವಹಿಸಿವೆ. ಪ್ರಪಂಚದಾದ್ಯಂತದ ಸಂದರ್ಶಕರು ತಮ್ಮ ಅನೇಕ ಪ್ರಶ್ನೆಗಳಿಗೆ ಸೋಫಿಯಾ ಅವರ

ಪ್ರತಿಕ್ರಿಯೆಗಳಿಂದಾಗಿ ಪ್ರಭಾವಿತಗೊಳಿಸಿತು. ವಿಸ್ಮಯವೆಂದರೆ ಅಕ್ಟೋಬರ್ 2017 ರಲ್ಲಿ ಇದು ಸೌದಿ ಅರೆಬೀಯಾದ ಪೌರತ್ವ ಪಟ್ಟವನ್ನು ತನ್ನ ಮುಡಿಗೆರಿಸಿಕೊಂಡಿದ್ದು. ನವೆಂಬರ್ 2017 ರಲ್ಲಿ, ಯುನೈಟೆಡ್ ನೇಷನ್ಸ್ ಡೆವಲಪ್ಮೆಂಟ್ ಪ್ರೋಗ್ರಾಮ್ನ ಮೊಟ್ಟಮೊದಲ ಇನ್ನೋವೇಶನ್ ಚಾಂಪಿಯನ್ ಎಂದು ಗುರುತಿಸಿಕೊಂಡಿತು. ಗೂಗಲ್ ಮಾತೃ ಸಂಸ್ಥೆಯಾದ ಆಲ್ಫಾಬೆಟ್ ಸೋಫಿಯಾವನ್ನು ರಚಿಸಲಾಯಿತು. ತಯಾರಕ ಪ್ರಕಾರ, ಸೋಫಿಯಾ ಕೃತಕ ಬುದ್ಧಿಮತ್ತೆ, ದೃಷ್ಟಿಗೋಚರ ದತ್ತಾಂಶ ಪ್ರಕ್ರಿಯೆ ಮತ್ತು ಮುಖದ ಗುರುತಿಸುವಿಕೆಗೆ ಬಳಸಲಾಗುತ್ತದೆ. ಸೋಫಿಯಾ ಮಾನವ ಸನ್ನೆಗಳು ಮತ್ತು ಮುಖದ ಅಭಿವ್ಯಕ್ತಿಗಳನ್ನು ಅನುಕರಿಸುತ್ತದೆ ಮತ್ತು ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಾಗುತ್ತದೆ ಮತ್ತು ಪೂರ್ವನಿರ್ಧಾರಿತ ವಿಷಯಗಳ ಬಗ್ಗೆ ಸರಳ ಸಂಭಾಷಣೆಗಳನ್ನು ಮಾಡಲು ಸಾಧ್ಯವಾಗುತ್ತದೆ (ಉದಾಹರಣೆಗೆ ವಾತಾವರಣದಲ್ಲಿ). ಶುಶ್ರೂಷಾ ಮನೆಗಳಲ್ಲಿ ಹಿರಿಯರಿಗೆ ಸೂಕ್ತವಾದ ಒಡನಾಡಿಯಾಗಲು ಅಥವಾ ದೊಡ್ಡ ಘಟನೆಗಳು ಅಥವಾ ಉದ್ಯಾನವನಗಳಲ್ಲಿ ಜನಸಮೂಹದ ಸಹಾಯ ಮಾಡಲು ಹ್ಯಾನ್ಸನ್ ಸೋಫಿಯಾವನ್ನು ವಿನ್ಯಾಸಗೊಳಿಸಿದರು.

ಶ್ರೀಮತಿ ಆಶಾ ಮುನಿರಾಜ್
ಕನ್ನಡ ಶಿಕ್ಷಕಿ

## ಮಾತೆ ಮಮತೆ




ಹಸುವು ಕಂದನ ಕರೆವ ಹಾಗೆ

ಇರುಳು ಚಂದ್ರನ ಕರೆವ ಹಾಗೆ

ಅಮ್ಮ ಕರೆದ ಅಕ್ಕರೆಯ ಕರೆಗೆ
ಕರಗಿ ಹೋದ ನಾನು ಮಂಜುಗಡ್ಡೆಯ
ಹಾಗೆ ಅಮ್ಮನ ಪ್ರೀತಿ ವಾತ್ಸಲ್ಯದ
ಮಧುರ ನುಡಿಗೆ

ಅನನ್ಯ ಎ.ರೆಡ್ಡಿ

(೯ನೇ ತರಗತಿ)



# ಕಿವಿ ಮಾತು

ನಮ್ಮ ಸಹಿ ಹಸ್ತಾಕ್ಷರವಾಗಿ ಬದಲಾಗುವುದೇ ಯಶಸ್ಸು.

ಯಶಸ್ಸು ಅನುಭವಿಸಬೇಕಿದ್ದರೇ ಕಷ್ಟಗಳು ಅನಿವಾರ್ಯ.

ನಮ್ಮ ಕನಸು ನನಸಾಗಲು ಮೊದಲು ನಾವು ಕನಸು ಕಣಬೇಕು.

ಸೋಲಿನ ಕತೆಗಳನ್ನು ಓದುವುದರಿಂದ ಗೆಲುವಿನ ಹಾದಿ ತಿಳಿಯುತ್ತದೆ

ಸೋಲೆಂಬ ರೋಗ ನಿವಾರಣೆಗೆ ಆತ್ಮವಿಶ್ವಾಸವೆ ಮದ್ದು.

ಯಾವುದೇ ಸಮಸ್ಯೆಗೆ, ಯುದ್ಧವೇ ಅಂತಿಮ ಪರಿಹಾರವಲ್ಲ.

ನಮ್ಮೆಲ್ಲರಲ್ಲೂ ಒಂದೇ ಪ್ರತಿಭೆ ಇಲ್ಲ, ಆದರೆ ಪ್ರತಿಭೆಯನ್ನು ಬಳೆಸಿಕೊಳ್ಳಲು ಸಮಾನ ಅವಕಾಶವಿದೆ.

ಸೂರ್ಯನಂತೆ ಪ್ರಜ್ವಲಿಸಲು, ಮೊದಲು ಅವನಂತೆ ತನ್ನನ್ನು ಸುಟ್ಟು, ಉರಿಯಬೇಕು.

ಕೆಲವರನ್ನು ಸೋಲಿಸುವುದು ಸುಲಭ, ಆದರೆ ಹಲವರನ್ನು ಗೆಲ್ಲುವುದು ಕಠಿಣ.
ನೀವು ಮಾಡುವ ಕೆಲಸವನ್ನು ಪ್ರೀತಿಸಿ, ಶ್ರದ್ಧೆಯಿಂದ ಕೆಲಸ ಮಾಡಿ, ಆತ್ಮಶುದ್ಧಿ ಮಾಡಿಕೊಳ್ಳಿ.
ನಿಮ್ಮ ಭವಿಷ್ಯ ಬದಲಾಗಬೇಕಾದರೆ, ಮೊದಲು ನಿಮ್ಮ ಹವ್ಯಾಸಗಳನ್ನು ಬದಲಿಸಿಕೊಳ್ಳಿ.
ಜೀವನ ನಮ್ಮ ಗುರಿಯನ್ನು ನಿರ್ದೇಶಿಸುತ್ತದೆ, ಸಮಯ ಜೀವನದ ಮೌಲ್ಯವನ್ನು ನಿರ್ಧರಿಸುತ್ತದೆ.

**ಶ್ರೀಮತಿ ಆಶಾ ಮುನಿರಾಜ್**

ಕನ್ನಡ ಶಿಕ್ಷಕಿ

## ಪರಿವರ್ತನೆ

(ಯಶಸ್ವಿ ಜೀವನಕ್ಕೆ ದಾರಿ)

ನಿದ್ದೆಯಲ್ಲಿ ಕಾಣುವಂತದ್ದು ಕನಸಲ್ಲ,
ನಿದ್ದೆಗೆಡುವಂತೆ ಮಾಡುವುದಿದೆಯಲ್ಲ
ಅದೇ ನಿಜವಾದ ಕನಸು
ಡಾ. ಎ.ಪಿ.ಜೆ ಅಬ್ದುಲ್ ಕಲಾಂ

ಭೂಮಿ ಮೇಲೆ ಜನಿಸಿದ ಪ್ರತಿಯೊಬ್ಬರ ವ್ಯಕ್ತಿತ್ವ ವಿಭಿನ್ನವಾಗಿರುತ್ತದೆ. ಅದೇ ರೀತಿ ಪ್ರತಿಯೊಬ್ಬರ ಅಭಿರುಚಿ, ಆಕಾಂಕ್ಷೆಗಳು, ಅಭಿಪ್ರಾಯಗಳು ಸಹ ಭಿನ್ನವಾಗಿರುತ್ತದೆ. ಇದರಲ್ಲಿ ಬಾಹ್ಯವರ್ತನೆಯು ಸೇರ್ಪಡೆಯಾಗುತ್ತದೆ. ಇದನ್ನು ಉತ್ತಮ ಪಡಿಸಿಕೊಳ್ಳುವುದು ನಮ್ಮ ಹೊಣೆಯಾಗಿರುತ್ತದೆ. ಬಾಹ್ಯವರ್ತನೆಯು ನಮ್ಮ ವ್ಯಕ್ತಿತ್ವವನ್ನು ಉತ್ತಮ ಪಡಿಸಿಕೊಳ್ಳುವುದರಲ್ಲಿ ಮಹತ್ತರವಾದ ಪಾತ್ರವಹಿಸುತ್ತದೆ.

ಬಾಹ್ಯ ವರ್ತನೆಯನ್ನು ಬದಲಾಯಿಸಿಕೊಂಡು ನಮ್ಮ ವ್ಯಕ್ತಿತ್ವವನ್ನು ಸಕಾರಾತ್ಮಕವಾಗಿ ರೂಪಿಸಿಕೊಳ್ಳುವುದು ಕ್ಲಿಷ್ಟಕರ ಸಂಗತಿಯಲ್ಲ. ನಮ್ಮ ನಡೆ-ನುಡಿಗಳಲ್ಲಿ ಕೆಲವು ಪರಿವರ್ತನೆಗಳ ಮೂಲಕ ಆಕರ್ಷಕ ವ್ಯಕ್ತಿತ್ವವನ್ನು ನಮ್ಮದಾಗಿಸಿಕೊಳ್ಳ ಬಹುದು. ಅದಕ್ಕಾಗಿ ತಲೆಕೆಳಗಾಗಿ ಮಾಡಬೇಕಾದ ಅಗತ್ಯತೆ ಇಲ್ಲ. ಸಣ್ಣ-ಪುಟ್ಟ ಬದಲಾವಣೆಯನ್ನು ನಮ್ಮ ವರ್ತನೆಯಲ್ಲಿ ಮಾಡಿಕೊಂಡರಾಯಿತು. ಅಂತಹ ಕೆಲವು ಅಂಶಗಳು ಇಲ್ಲಿವೆ.

* ಸಂವಹನ ಕೌಶಲವನ್ನು ವೃದ್ಧಿಸಿಕೊಳ್ಳಿ
* ಸಂಬಂಧದ ಅಗತ್ಯತೆಯನ್ನು ಗುರುತಿಸಿಕೊಳ್ಳಿ.
* ಭಾವನಾತ್ಮಕ ಬುದ್ಧಿವಂತಿಕೆಯನ್ನು ಹೆಚ್ಚಿಸಿಕೊಳ್ಳಿ.
* ಸಹೋದ್ಯೋಗಿಗಳ ಸಾಧನೆಯನ್ನು ಪ್ರಶಂಸಿಸಿ.
* ಯೋಚನೆ ಧನಾತ್ಮಕವಾಗಿರಲಿ.
* ಕಾರ್ಯಕ್ಷೇತ್ರದಲ್ಲಿನ ಇತಿಮಿತಿಗಳು ಗಮನದಲ್ಲಿರಲಿ.
* ಗುರಿ ತಲುಪಲು ಸಿಗುವ ಅವಕಾಶಗಳನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳುವುದನ್ನು ಅರಿತುಕೊಳ್ಳಬೇಕು 'If wealth is lost, something is lost, but if confidence is lost everything is lost' ಎಂಬಂತೆ ಆತ್ಮವಿಶ್ವಾಸವಿಲ್ಲದಿದ್ದರೆ ಏನನ್ನೂ ಸಾಧಿಸಲಾಗುವುದಿಲ್ಲ. 'ನಾನು ಸಾಧಿಸಬಲ್ಲೆ' ಎಂಬ ದೃಢ ವಿಶ್ವಾಸ ಇರಲಿ.

ಶ್ರೀಮತಿ ಆಶಾಮುನಿರಾಜ್
(ಕನ್ನಡ ಶಿಕ್ಷಕಿ)

# ಸಮಯ ನಿರ್ವಹಣಾ ಕೌಶಲ್ಯ

ಸಮಯ, ಕಾಲ ಅತ್ಯಂತ ಬೆಲೆ ಬಾಳುವಂಥದು. ಕೋಟಿ ಕೊಟ್ಟರೂ ಕಳೆದು ಹೋದ ಒಂದು ನಿಮಿಷ ಕೂಡ ಸಿಗಲಾರದು. 'Time and tide wait for none' ಎಂಬ ಆಂಗ್ಲೋಕ್ತಿಯಂತೆ ಕಾಲ ಯಾರಿಗೂ ಕಾಯುವುದಿಲ್ಲ.

ನಮಗೆ ನಿಮಗೆ ಎಲ್ಲರಿಗೂ ದಿನಕ್ಕೆ 24 ಗಂಟೆಗಳೇ! ಆದರೂ ಕೆಲವರು ಅದ್ಭುತ ಯಶಸ್ಸು ಗಳಿಸುತ್ತಾರೆ. ಅವರಿಗೆ ಸಮಯದ ಮಹತ್ವ ಗೊತ್ತಿದೆ. ಇರುವ 24 ಗಂಟೆಗಳನ್ನು ತನ್ನ ಅಭಿವೃದ್ಧಿಗೆ, ವ್ಯಕ್ತಿತ್ವದ ಬೆಳವಣಿಗೆಗೆ, ಕುಟುಂಬ, ಸಮಾಜದ ಒಳಿತಿಗೆ ಹೇಗೆ ಉಪಯೋಗಿಸಿಕೊಳ್ಳುವುದು ಎಂದು ಸೂಕ್ತ ರೀತಿಯಲ್ಲಿ ಯೋಚನೆ ಮಾಡಿ, ಯೋಜನೆ ರೂಪಿಸಿ, ಕಾರ್ಯಗತ ಮಾಡುವವನೇ ಜಾಣ. ಈ ಅಂಶಗಳನ್ನು ಸೂಕ್ತ ರೀತಿಯಲ್ಲಿ ಸರಿಯಾದ ಸಂದರ್ಭಗಳಲ್ಲಿ ಬಳಸಿಕೊಂಡಲ್ಲಿ ಯಶಸ್ಸು ಗಳಿಸಲು ಸಾಧ್ಯ.

ಶ್ರೀಮತಿ ಆಶಾಮುನಿರಾಜ್
(ಕನ್ನಡ ಶಿಕ್ಷಕಿ)

## ಕರ್ನಾಟಕದ ಇತಿಹಾಸ ಮತ್ತು ಕನ್ನಡ ಭಾಷೆ

ಕರ್ನಾಟಕಕ್ಕೆ ತನ್ನದೆ ಆದ ಭವ್ಯವಾದ ಇತಿಹಾಸ ಪರಂಪರೆಯಿದೆ, ಸಿಂಧೂ ನದಿ ಕಣಿವೆಯ ಸಂಸ್ಕೃತಿಯ ಕಾಲದಿಂದಲೂ ಕರ್ನಾಟಕದ ಇತಿಹಾಸವನ್ನು ಗಮನಿಸಬಹುದಾಗಿದೆ.ಮಹಾಭಾರತ ರಾಮಾಯಣಗಳಲ್ಲಿಯೂ ಕರ್ನಾಟಕದ(ಕಳ್ನಾಟ) ಉಲ್ಲೇಖ ಕಂಡು ಬರುತ್ತದೆ. ರಾಮಾಯಣದಲ್ಲಿ ನೇರವಾಗಿ ಕರ್ನಾಟಕ ಎಂದು ಬರದೇ ಇದ್ದರೂ ದಂಡಕಾರಣ್ಯ, ಗೋದಾವಾರಿ, ಕಾವೇರಿ,ತಾಮ್ರಪರ್ಣಿ ಮುಂತಾದ ಹೆಸರಿನ ಉಲ್ಲೇಖವಿದೆ. ರಾಮಾಯಣದ ಹನುಮನು ಕನ್ನಡಿಗನೇ ಎಂದು ಹೇಳಲಾಗಿದೆ. ಸೀತಾನ್ವೇಷಣಗಾಗಿ ಸುಗ್ರೀವನು ವಾನರರನ್ನು ಗೋದಾವರಿ, ಕೃಷ್ಣವೇಣಿ,ಕಾವೇರಿ ,ತಾಮ್ರಪರ್ಣಿಗಳಿಗೆ ಕಳುಹಿಸಿದನೆಂದಿದೆ ವಾಲಿಯ ಕಿಷ್ಕಂದೆ ಇಂದಿನ ಹಂಪಿ ಎಂದೂ ಊಹಿಸಲಾಗಿದೆ. ಹೀಗೆ ಪ್ರಾಚೀನ ಕಾಲದಿಂದಲೂ ಅಸ್ಥಿತ್ವದಲ್ಲಿದ್ದ ಕನ್ನಡ ನಾಡು ೫ನೇ ಶತಮಾನದಿಂದ ಬೆಳೆದು ಬಂದಿತೆಂಬುದರಲ್ಲಿ ಸಂಶಯವಿಲ್ಲ.

ಭಾರತದ ಹಿರಿಮೆ ಮತ್ತು ಗರಿಮೆಯ ಮಗಳೆಂದರೆ ಕರ್ನಾಟಕ ಭಾರತಕ್ಕೆ ಸಲ್ಲುವ ಗೌರವ,ಕೀರ್ತಿ ಕನ್ನಡ ತಾಯಿಗೂ ಸಲ್ಲಬೇಕು .ಕರ್ನಾಟಕವು ಹಿರಿಯ ಮಗಳಾಗಿ ಭಾರತಾಂಬೆಗೆ ಎಲ್ಲಾ ದೃಷ್ಠಿಯಿಂದ ಕೃತಜ್ಞತಾಪೂರ್ವಕವಾಗಿ ಮಾಡುತ್ತಲೇ ಇದ್ದಾಳೆ.ಕರ್ನಾಟಕದಲ್ಲಿ ಕನ್ನಡವನ್ನು ಕಡ್ಡಾಯವಾಗಿ ತರಲೇಬೇಕೆಂಬ ಅಭಿಪ್ರಾಯ ಬಹಳಷ್ಟು ದಿನಗಳಿಂದಿದೆಯಾದರು ನಮ್ಮಲ್ಲಿ ನಮ್ಮ ತಾಯಿಯ ನುಡಿ,ನೆಲದಭಿಮಾನವಿಲ್ಲ.ನಿರಭಿಮಾನವೇತುಂಬಿ ತುಳುಕುತ್ತಾ ಅದೇನು ಬಿಡು ಅದನ್ನು ಕಟ್ಟಿಕೊಂಡು ಏನು ಮಾಡುವುದು?ಹೀಗೆ ತಿರಸ್ಕಾರದ ಮಾತುಗಳು ತಾಂಡವವಾಡುತ್ತಿವೆ.ಅಕ್ಕ, ಪಕ್ಕದ ರಾಜ್ಯದ ಜನತೆ ಸ್ವಾಭಿಮಾನದಿಂದ ತಮ್ಮ ನಾಡು,ನುಡಿ,ಜಲದ ಬಗ್ಗೆ ಅತ್ಯುನ್ನತ ಸಾಧನೆಯನ್ನು ಸಾಧಿಸಿದ್ದಾರೆ ನಾವು ಸ್ಥಗಿತಗೊಂಡಿದ್ದೇವೆ ಇದನ್ನು ನೋಡಿ ನಮ್ಮ ಕನ್ನಡದ ಕಣ್ವ ಬಿ.ಎಂ.ಶ್ರೀಯವರು ಹೀಗೆ ಹೇಳುತ್ತಾರೆ

ಅಕ್ಕ ತಂಗಿಯರೆಲ್ಲ ಮುಂದು ಮುಂದಾಗಿರಲು
ನಮ್ಮ ತಾಯೊಬ್ಬಳೇ ಸೊರಗಿ ಸಾಯುತಿಹಳು
ಮೈಯೊಳಗೆ ಹುರುಳಿಲ್ಲ ಕೈಯೊಳಗೆ ಕಾಸಿಲ್ಲ,ಕೇವಲ ಛಲದಲ್ಲಿಯೇ ಕಳೆದಳು-
ಹೆಮ್ಮೆಯೊಡನೆ ಮೆಚ್ಚಿ ದೆಸೆಗೆಟ್ಟೆವು.

ಇದನ್ನು ನೋಡಿದರೆ ನಾವು ಎಷ್ಟು ಹಿಂದಿದ್ದೇವೆಂಬುದು ತಿಳಿಯುತ್ತದೆ.ನಮ್ಮಲ್ಲಿ ಎಲ್ಲಾ ಇದೆ ಆದರೆ ಅಭಿಮಾನ ಮಾತ್ರ ಇಲ್ಲ ನಾವು ಬಹಳ ಧಾರಾಳ ವ್ಯಕ್ತಿಗಳು ನಮ್ಮ ನಾಡಿನ ಮೇಲೆ ಯಾರು ಸವಾರಿ ಮಾಡಿದರೇನು ಮೌನವಾಗಿತುವುದು ನಮ್ಮ ಜಾಯಮಾನವಾಗಿದೆ.ಇದನ್ನು ನೋಡಿ ನಮ್ಮ ರಸ ಋಷಿ ಕುವೆಂಪು ಹೀಗೆ ಎಚ್ಚರಿಸುತ್ತಾರೆ.

ಸಾಯುತಿದೆ ನಿಮ್ಮ ನುಡಿ ಕನ್ನಡದ ಕಂದರಿರಾ
ಹೊರ ನುಡಿಯ ಹೊರೆಯಿಂದ ಕುಸಿದು ಕುಗ್ಗಿ!
ರಾಜ ನುಡಿಯೊಂದೊಂದು,ರಾಷ್ಟ ನುಡಿಯೊಂದೊಂದು
ದೇವ ನುಡಿಯೊಂದೊಂದು ಹತ್ತಿ ಜಗ್ಗಿನಿರಿನಿಡಿಲು
ನಿಟಿಲೆಂದು ಮುದಿ ಮೂಳೆ ಮುರಿಯುತಿದೆ.

ಕನ್ನಡಮ್ಮನ ಬೆನ್ನು ಬಳುಕಿ ಬಗ್ಗಿ

ಕೂಗಿಕೊಳ್ಳಲು ಕೂಡ ಬಲವಿಲ್ಲ ಮಕ್ಕಳೇ

ಬಾಯ್ಮುಚ್ಚಿ ಹಿಡಿದಿಹರು ಕೆಲವರು ನುಗ್ಗಿ!

ಹೈದರಾಬಾದ್ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣವನ್ನು ಮಾಡುತ್ತಾ ಎ.ಆರ್ ಕೃಷ್ಣ ಶಾಸ್ತ್ರಿಗಳು ಹೀಗೆ ಹೇಳಿದ್ದರು.

ಏನಾದರೂ ಒಂದು ದುರದೃಷ್ಟಿಯಿಂದ -ಅಂಥ ದುರದೃಷ್ಟ ಬರದಿರಲಿ -ನಮ್ಮ ದೇಶದಲ್ಲಿ ಬೌದ್ಧ ಧರ್ಮ ಖಿಲವಾಗಿ ನಷ್ಟವಾಗಿ ಹೋದಂತೆ ಸಂಸ್ಕೃತವೂ ಆಗಿ ಹೋಗುವುದಾದರೆ, ಅದು ಹೋರ ದೇಶದಲ್ಲಿ ಬದುಕಿರುತ್ತದೆ, ಬಾಳುತ್ತಿರುತ್ತದೆ.ಆದರೆ ಕನ್ನಡ?ಕನ್ನಡಿಗರೇ , ನಿಮ್ಮ ಕನ್ನಡವನ್ನು ಭಾರತ ದೇಶದ ದಕ್ಷಿಣ ಭಾಗದಲ್ಲಿ ಒಂದು ಅಂಗೈ ಅಗಲ ಬಿಟ್ಟರೆ ಮತ್ತೆಲ್ಲಿಯೂ ನೋಡಿಲಾರಿರಿ,ನೀವೂ ಅದನ್ನು ಆಲಕ್ಷ್ಯ ಮಾಡಿದರೆ ಮಿಕ್ಕ ಯಾವ ದೇಶದ,ಯಾವ ಜನರೂ ಅದನ್ನು ಎತ್ತಿ ಹಿಡಿಯಲಾರರು ಅದು ಹೋದರೆ ಹೋಗಲಿ ಎನ್ನುವುದಾದರೆ ಈ ಕಡೆ ಬಂಗಾಳಕೊಲ್ಲಿ ಇದೆ,ಆ ಕಡೆ ಅರಬ್ಬಿ ಸಮುದ್ರ ಇದೆ ,ಗುಡಿಸಿ ಹಾಕಿ ಬಿಡಿ,ಇತರೆ ಭಾಷೆಗಳು ಒತ್ತಿಕೊಂಡು ಬರಲಿ,ಆಕ್ರಮಿಸಿಕೊಳ್ಳಲಿ! ಕೃಷ್ಣ ಶಾಸ್ತ್ರಿಗಳು ಈ ಮಾತುಗಳನ್ನು ಕೇಳಿದರೆ ಮನಸ್ಸಿಗೆ ಭೇದ,ಭಯ,ಅಸಹಾಯಕತೆ ಕ್ರೋದ ಉಂಟಾಗುತ್ತದೆ. ಕರ್ನಾಟಕದಲ್ಲಿ ಅದು ಕೂಡ ಅಭಿವೃದ್ಧಿ ಹೊಂದುತ್ತಿರುವ ನಗರಗಳಲ್ಲಿ ಕನ್ನಡ ಭಾಷೆಯು ಕೆಳಮಟ್ಟಕ್ಕಿಳಿದಿದೆ. ಕನ್ನಡದ ಪ್ರಸಿದ್ಧ ಲೇಖಕರಾದ ಹಾ,ಮಾ,ನಾಯಕರು ಒಮ್ಮೆ ತಮ್ಮ ಸ್ನೇಹಿತರೊಡನೆ ವಿಮಾನದಲ್ಲಿ ಪ್ರಯಾಣಿಸಲು ಬೆಂಗಳೂರಿನ ವಿಮಾನ ನಿಲ್ದಾಣಕ್ಕೆ ಬಂದಿದ್ದರು ನಾಯಕರ ಸ್ನೇಹಿತರು ವಿಮಾನ ನಿಲ್ದಾಣದಲ್ಲಿ ಅವರನ್ನು ಇದೇನೂ ಸರ್ ನಾವೂ ಎಲ್ಲಿದ್ದಿವೇ? ಇಲ್ಲಿ ಒಂದೂ ಕನ್ನಡ ಅಕ್ಷರವೇ ಕಾಣಿಸುವುದಿಲ್ಲ ಎಂದಾಗ ಹಾ, ಮಾ, ನಾಯಕರು ಕಾಣಿಸದೆ ಏನು?ಅಲ್ಲಿ ನೋಡಿ ಕಕ್ಕಸಿನ ಮನೆ ಕನ್ನಡದಲ್ಲಿ ಗಂಡಸರು ಹೆಂಗಸರು ಎಂದು ಬರೆದಿದ್ದರಲ್ಲ ಎಂದು ತೋರಿಸಿದರು ಅವರ ಮಾತಿನಲ್ಲಿ ವ್ಯಂಗ್ಯವಿದ್ದರು ಇಂಥಹ ಸ್ಥಿತಿಗತಿಗೆ ಮನಸ್ಸಿನಲ್ಲಿ ಅಪಾರವಾದ ನೋವಿತ್ತು.

ಪ್ರತಿಯೊಬ್ಬ ತಂದೆ ತಾಯಿಗಳೂ ತಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಬೇಕು ,ಅವರ ಭವಿಷ್ಯ ಉಜ್ವಲವಾಗಿರಬೇಕು ಎಂದು ಆಶಿಸುತ್ತಾರೆ. ಅವರು

ನ್ಯಾಯವಾಗಿಯೇ ಅಸಹ್ಯ ಎನ್ನಿಸುವ ನಮ್ಮ ಸಾರ್ವಜನಿಕ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸಲು ಇಷ್ಟ ಪಡುವುದಿಲ್ಲ.ಎಷ್ಟೋ ಕಡೆಗಳಲ್ಲಿರುವ ಶಾಲೆಗಳನ್ನು ಒಮ್ಮೆ ನೋಡಿ ಕುಸಿದು ಬೀಳುತ್ತಿರುವ ಕಟ್ಟಡಗಳು,ದೊಡ್ಡಿಯಾದ ತರಗತಿಗಳು,ಅಧ್ಯಾಪಕರಿಲ್ಲದ ತರಗತಿಗಳು,ಶಿಸ್ಥಿಲ್ಲದ ವ್ಯವಸ್ಥೆ,ಮೂತ್ರದ ವಾಸನೆಯ ಪರಿಸರ-ಇದು ಬಹಳಷ್ಟು ಶಾಲೆಗಳ ಸ್ಥಿತಿ,ಆದ್ಧರಿಂದ ಸಾರ್ವಜನಿಕ ಅನಿವಾರ್ಯವಾಗಿ ಖಾಸಗಿ ಉದ್ಯಮವಾದ ಆಂಗ್ಲ ಶಾಲೆಗಳ ಕಡೆಗೆ ಹೋಗುತ್ತಾರೆ. ಎಲ್ಲಿಯವರೆಗೆ ನಮ್ಮ ಸಾರ್ವಜನಿಕ ಶಾಲೆಗಳ ಸ್ಥಿತಿಗಳು ಉತ್ತಮವಾಗಿರುವುದಿಲ್ಲವೊ ಅಲ್ಲಿಯವರೆಗೆ ಶಿಕ್ಷಣದಲ್ಲಿ ಕನ್ನಡ ಆಕರ್ಷಕವೆನಿಸುವುದಿಲ್ಲ ಎನ್ನುವುದು ಡಾ// ಹಾ,ಮಾ,ನಾಯಕರ ಅಭಿಪ್ರಾಯ. ಇದು ಸತ್ಯವೂ ಕೂಡ.

ಪ್ರತಿಯೊಬ್ಬ ಕನ್ನಡಿಗನೂ ಅಂಗುಲ ಅಂಗುಲದಲ್ಲಿ ಕನ್ನಡಿಗನಾಗಬೇಕು ಕನ್ನಡ ಕನ್ನಡ ಎನ್ನುವ ನಾವು ,ಪ್ರತಿ ವರ್ಷ ನವೆಂಬರ್ ತಿಂಗಳು ಬಂದರೆ ಅದ್ದೂರಿಯಾಗಿ ಕನ್ನಡ ರಾಜ್ಯೋತ್ಸವವನ್ನು ಆವರಿಸುವ ನಾವು,ನಮ್ಮನ್ನೇ ಪ್ರಶ್ನಿಸಿಕೊಳ್ಳುವುದು ತೀರ ಅಗತ್ಯ ಕನ್ನಡ ಹೇಳುವುದಕ್ಕೆ ಮಾತ್ರ ಅಲ್ಲ ,ಅನುಸರಿಸುವುದಕ್ಕೂ ಎಂದು ಎಷ್ಟು ಜನ ತಿಳಿದಿದ್ದೇವೆ?

ನಾವು ಯಾವ ಪತ್ರಿಕೆಗಳನ್ನು ಓದುತ್ತೇವೇ?

ನಾವು ನೋಡುವುದು ಯಾವ ಸಿನಿಮಗಳನ್ನು?ನಮ್ಮ ಬೋರ್ಡ್ ಯಾವ ಭಾಷೆಯಲ್ಲಿದೆ? ನಮ್ಮ ,ಮನೆಯ ಲಗ್ನ ಪತ್ರಿಕೆ ಅಚ್ಚಾಗಿರುವುದು ಯಾವ ಭಾಷೆಯಲ್ಲಿ? ನಾವು ಬ್ಯಾಂಕುಗಳಿಗೆ ಚೆಕ್ಕು ಬರೆಯುವುದು ಕನ್ನಡದಲ್ಲೇ?ನಾವು ಬರೆಯುವ ಕಾಗದ ಪತ್ರಿಕೆಗಳಲ್ಲಿ ಎಷ್ಟು ಭಾಗ ಕನ್ನಡ? ಇಂಥ ನೂರು ಪ್ರಶ್ನೇಗಳನ್ನು ನಾವು ಕೇಳಿಕೊಳ್ಳಬೇಕು. ಅವುಗಳ ಉತ್ತರ ನಮ್ಮನ್ನು ಚುಚ್ಚದಿದ್ದರೆ ಮಾತ್ರ ನಾವು ಕನ್ನಡವನ್ನು ಕುರಿತು ಮಾತನಾಡಲು ಯೋಗ್ಯತೆ ಗಳಿಸಿಕೊಂಡಿದ್ದೇವೆ ಎಂದು ಅರ್ಥ

ಆತ್ಮೀಯ ಓದುಗರೇ ಕನ್ನಡಿಗರು ಮೊದಲು ಕನ್ನಡಿಗರಾಗ ಬೇಕು ಎನ್ನುವುದು ನನ್ನ ಅಭಿಮತ

ಶ್ರೀಮತಿ

ಸಂಧ್ಯಾ ಜಯಕರ

# ಸಮಾಜ ನಿರ್ಮಾಣಕ್ಕೆ ನೈತಿಕ ಶಿಕ್ಷಣ

ಸಂಪತ್ತು ನಷ್ಟಹೊಂದಿದರೆ, ಏನೂ ನಷ್ಟವಿಲ್ಲ; ಆರೋಗ್ಯವು ಇಲ್ಲವಾದರೆ, ಏನೋ ಸ್ವಲ್ಪವನ್ನು ಕಳೆದುಕೊಂಡಂತೆ; ಆದರೆ ಮನುಷ್ಯನು ಸಚ್ಚಾರಿತ್ರ್ಯವನ್ನು ಹೊಂದದಿದ್ದರೆ, ಎಲ್ಲವನ್ನೂ ಕಳೆದುಕೊಂಡಂತೆ.

"ಗೋವಿನ ಹಾಡಿ"ನಲ್ಲಿ ಪುಣ್ಯಕೋಟಿಗೆದುರಾದ ಕಷ್ಟಕೋಟಲೆಗಳನ್ನೋದಿ ಕಣ್ಣೀರು ಸುರಿಸದ, ಅದರ ಸತ್ಯಸಂಧತೆಯನ್ನು ಮನದಲ್ಲೇ ಮೆಲುಕು ಹಾಕದ ವಿದ್ಯಾರ್ಥಿಗಳಿರಲಿಲ್ಲ. ಅಂದಿನ ವಿದ್ಯಾರ್ಥಿಗಳ ಮನದಲ್ಲಿ ಶಿವಾಜಿ ಮಹಾರಾಜನ ದೇಶಭಕ್ತಿ, ಕಿತ್ತೂರು ಚೆನ್ನಮ್ಮಾಜಿಯ ಶೌರ್ಯ, ಮ್ಯಾಕ್ಸ್ ಮುಲ್ಲರನು ನಮ್ಮ ಸನಾತನ ಸಂಸ್ಕೃತಿಯನ್ನು ಅವಹೇಳನ ಮಾಡಹೋಗಿ ಕೊನೆಗೆ ಅದನ್ನೇ ತನ್ನ ಜೀವಾಳವನ್ನಾಗಿ ಪರಿವರ್ತಿಸಿಕೊಂಡು ಅವನು ಭಾರತೀಯತೆಗೆ ಸಲ್ಲಿಸಿದ ಕಾಣಿಕೆಯೇ ಮೊದಲಾದ ಸದ್ವಿಚಾರಗಳು ಅಚ್ಚಳಿಯದ ಛಾಪನ್ನೊತ್ತಿದ್ದವು. ಅದೇ ಸಮಯದಲ್ಲಿ ಮಹಾತ್ಮಾ ಗಾಂಧೀಜಿಯವರು ದೇಶದ

ನಾಡಿಮಿಡಿತವನ್ನರಿತು ಸದಾಚಾರಿಗಳಾಗುವಂತೆ ಕರೆಕೊಟ್ಟಾಗ ದೇಶಕ್ಕೆ ದೇಶವೇ ಓಗೊಟ್ಟು ಸತ್ವಯುತವಾದ ಸಮಾಜದ ನಿರ್ಮಾಣವಾಗಿತ್ತೆಂದರೆ, ಅದು ಅತಿಶಯೋಕ್ತಿಯೆನಿಸದು. ಆದರೆ ಅದಾದ ಕೆಲವರ್ಷಗಳ ನಂತರದಲ್ಲಿಯೇ ನೈತಿಕವಾಗಿ ನಾವೆಷ್ಟು ಅಧೋಗತಿಗಿಳಿದುಬಿಟ್ಟೆವು? ಪಾಶ್ಚಾತ್ಯರ ಸದ್ವಿಚಾರಗಳನ್ನು ಅವಗಾಹಿಸದೇ, ಅವರ ಸ್ವೇಚ್ಛಾಜೀವನಶೈಲಿಯಷ್ಟನ್ನೇ ಅಂಧಾನುಕರಣೆ ಮಾಡುವ ಜನತೆ, ಕೋಮುದಳ್ಳುರಿಯೆಬ್ಬಿಸಿ ಸಮಾಜದ ಸ್ವಾಸ್ಥ್ಯವನ್ನು ಹಾಳುಮಾಡಿ ಪರಸ್ಪರರಲ್ಲಿ ಗೌರವ, ಸಹಕಾರ ಪ್ರವೃತ್ತಿ ನಿರ್ಮಾಣವಾಗದಂತೆ ಮಾಡಿ ಸ್ವಹಿತಾಸಕ್ತಿಯನ್ನು ಕಾಯ್ದುಕೊಳ್ಳುವ ಪಟ್ಟಭದ್ರ ಹಿತಾಸಕ್ತಿಗಳು, ಭ್ರಷ್ಟಾಚಾರ, ಲಂಚಗುಳಿತನಗಳೇ ಮೊದಲಾದ ಕರಾಳ ಅಂಶಗಳಿಂದ ಸಮಾಜ ನರಳುತ್ತಿದೆ. ಇದಕ್ಕೆಲ್ಲಾ ನವಯುಗದ ನಿರ್ಮಾತರಾದ ಮಕ್ಕಳಿಗೆ ನೈತಿಕ ಶಿಕ್ಷಣವನ್ನೊದಗಿಸುವುದೇ ಸಂಜೀವಿನಿಯಾಗಿದೆ.

ಅದೇನೇ ಇರಲಿ; "ಹಿಂದಿನ ಕಾಲ ಚೆನ್ನಾಗಿತ್ತು; ಈಗೆಲ್ಲಾ ಕೆಟ್ಟು ಕುಲವೆದ್ದು ಹೋಗಿದೆ"ಯೆಂಬ ನಿರಾಶಾದಾಯಕ ಸಿನಿಕತನವನ್ನು ಬದಿಗಿಟ್ಟು ಮುಂದೆ ಮಾಡಬಹುದಾದರೆಡೆಗೆ ಗಮನ ಹರಿಸೋಣ. ಮಕ್ಕಳಿಗೆ ಗಿಳಿಪಾಠವನ್ನಷ್ಟೇ ಮಾಡದೇ, ನೀತಿ, ಪ್ರಾಮಾಣಿಕತೆಗಳ ಮಹತ್ವವನ್ನರಿತು ಅವುಗಳನ್ನು ಸ್ವತಃ ಪಾಲಿಸಿ, ಮಕ್ಕಳಿಗೆ ಆದರ್ಶಪ್ರಾಯರಾಗಿ ಪ್ರೀತಿಯಿಂದ ಇದನ್ನು ಬೋಧಿಸುವ ಗುರುಸಮುದಾಯ ನಿರ್ಮಾಣವಾಗಬೇಕು. ಅಂತಹವರು ಸ್ವಲ್ಪ ಜನರಾದರೂ "ಎಲೆಮರೆಯ ಕಾಯಿ"ಗಳಂತೆ ನಮ್ಮ ಸಮಾಜದಲ್ಲಿದ್ದಾರೆಂಬುದು ಸಮಾಧಾನದ ಸಂಗತಿ! ಪಠ್ಯಕ್ರಮಗಳಲ್ಲಿ ಜ್ಞಾನಕ್ಕಿರುವಷ್ಟೇ ಸ್ಥಾನಮಾನವನ್ನು ನೈತಿಕ ಶಿಕ್ಷಣಕ್ಕೆ ನೀಡಬೇಕು. ನಾವೆಷ್ಟೇ ಸಿರಿವಂತರಾಗಿದ್ದರೂ ನಮ್ಮನ್ನು ರೂಪಿಸುವಲ್ಲಿ, ನಮ್ಮ ಮೇಲೆ ಸಮಾಜದ ಋಣವೊಂದಿದೆಯೆಂಬುದನ್ನು ಹಾಗೂ ಅದನ್ನು ನಮ್ಮ ಶಕ್ತ್ಯಾನುಸಾರವಾಗಿ ತೀರಿಸುವುದರತ್ತ ಪ್ರತಿಯೊಬ್ಬರೂ ಕಾಯಕಗೈಯ್ಯಬೇಕೆನ್ನುವ ಜಾಗೃತಿಯನ್ನು ನಮ್ಮ ಶಿಕ್ಷಣ ವ್ಯವಸ್ಥೆಯು ಮಕ್ಕಳಲ್ಲಿ ಮೂಡಿಸುವಂತಿರಬೇಕು. ಕೇವಲ ಮಕ್ಕಳಿಗೆ ಜನ್ಮ ನೀಡಿದರೆ ಸಾಲದು; ಅವರನ್ನು ದೇಶದ ಸತ್ಪ್ರಜೆಗಳನ್ನಾಗಿ ರೂಪಿಸಬೇಕೆಂಬ ನೈತಿಕತೆಯು ಪೋಷಕರಲ್ಲಿ ಮೂಡಬೇಕು. ಹಿರಿಯರಿಗೆ ಗೌರವವೀಯುವ, ಕಿರಿಯರನ್ನು ಆದರಿಸುವ, ನೊಂದವರ ಕಂಬನಿಯೊರೆಸುವ ಹಾಗೂ ಕೌಟುಂಬಿಕ ಹೊಣೆಯನ್ನರಿತು ಅದನ್ನು ನಿಭಾಯಿಸುವುದರ ಮಹತ್ವಗಳನ್ನು ಅವರು ಮಕ್ಕಳಿಗೆ ತಿಳಿಸಿಕೊಡಬೇಕು.ಏಕೆಂದರೆ ಮಕ್ಕಳಿಗೆ ಮನೆಯೇ ಮೊದಲ ಪಾಠಶಾಲೆಯಷ್ಟೇ? ಇಂಥಾ ಸಂಸ್ಕಾರಯುತವಾದ ವಾತಾವರಣದಲ್ಲಿ ಬೆಳೆದು ದೊಡ್ಡವರಾದ ಮಕ್ಕಳೆಂದೂ ಮುಂದೆ ಲಂಚದ ಹೇಸಿಗೆ ಕಾಸಿಗೆ ಕೈಯ್ಯನ್ನೊಡ್ಡರು; ಸಮಾಜವನ್ನು ವಂಚಿಸಿ ಅರ್ಥಾರ್ಜನೆಗೈಯ್ಯುವ ವಾಮಮಾರ್ಗದಲ್ಲಿ ನಡೆಯರು; ಅಬಲೆಯೊಬ್ಬಳ ಮೇಲೆ ಅತ್ಯಾಚಾರವೆಸಗುವ ಹೀನ ಕೆಲಸಕ್ಕೆ ಕೈಹಾಕರು; ಅವರೆಂದೂ ತಮ್ಮ ತತ್ವವೊಂದೇ ಸತ್ಯವೆಂದು ಬಗೆದು ಇತರರ ಮಂದಿರ-ಮಸೀದಿ-ಚರ್ಚುಗಳನ್ನು ಧ್ವಂಸಗೊಳಿಸುವ

ಸಂಕುಚಿತ ಮನೋಭಾವನೆ ತಾಳರು ಹಾಗೂ ಸಾಮಾಜಿಕ ಹಿತಾಸಕ್ತಿಗಳಿಗೆ ಧಕ್ಕೆಯೊದಗಿ ಬಂದಾಗ ಅದನ್ನು ಸರಿಯಾದ ರೀತಿಯಲ್ಲಿ ಪ್ರತಿಭಟಿಸಿ, ಅದಕ್ಕೆ ಸಮರ್ಪಕ ಪರಿಹಾರವನ್ನು ಕಂಡುಕೊಳ್ಳುವರು. ಅಲ್ಲವೇ? ಮಕ್ಕಳಿಗೆ ನೈತಿಕ ಶಿಕ್ಷಣವನ್ನು ನೀಡಿ ಅವರನ್ನು ತೇಜಸ್ವಿಗಳನ್ನಾಗಿಸಿ, ತನ್ಮೂಲಕ ಅದ್ಭುತ ಸತ್ಕಾರ್ಯಗಳನ್ನೆಸಗಬಲ್ಲ ಸಮಾಜನಿರ್ಮಾಣಕ್ಕೆ ನಾವೆಲ್ಲರೂ ಶ್ರಮಿಸೋಣವೇ?

**ಶ್ರೀಮತಿ ಅನಿತಾದಿವಾಕರ್**
**(ಕನ್ನಡ ಶಿಕ್ಷಕಿ)**

# ಯುವಜನತೆಯ ಚಿತ್ತ-ಎತ್ತ?



‘ಒಂದು ಬೆಳಕಿನಿಂದ ಇನ್ನೊಂದು ಬೆಳಕು ಮೂಡುತ್ತದೆ, ಒಂದು ಹಣತೆಯಿಂದ ನೂರಾರು ಹಣತೆಗಳುರಿದು ಲೋಕವೇ ಕಾಂತಿಯುಕ್ತವಾಗುತ್ತದೆ. ಆ ಹೊಳೆಯುವ ಹೊಂಬೆಳಕಿನಿಂದ, ಸುಖದ-ಶಾಂತಿಯ ಸಂಕೇತದಿಂದ ಲೋಕವು ಸ್ವರ್ಗವಾಗಿ ಮೆರೆಯುತ್ತದೆ

ಭಾರತದಂತಹ ಪುಣ್ಯಭೂಮಿಯಲ್ಲಿ, ಯುವಶಕ್ತಿಯೆಂದರೆ ನೆನಪಾಗುವುದು “ಸ್ವಾಮಿ ವಿವೇಕಾನಂದರು”. ಈ ಯುವಚೇತನ ಹುಟ್ಟಿದ್ದು ಭಾರತ ದೇಶದಲ್ಲಿಯೆಂಬ ಹೆಮ್ಮೆ ನಮ್ಮದು. ಅವರ ಭಾರತದಲ್ಲಿ ಹುಟ್ಟಿರುವ ಯುವಕರನ್ನು ಭಾರತದ ಪ್ರತಿ ಕ್ಷೇತ್ರದಲ್ಲಿ ತೊಡಗಿಸಬೇಕಿದೆ. ಯುವಕರಲ್ಲಿಯ ಬಿಸಿ ರಕ್ತವನ್ನು ಈ ದೇಶದ ರಕ್ಷಣೆ ಹಾಗೂ ಬೆಳವಣಿಗೆಯಲ್ಲಿ ಬಳಕೆಮಾಡಿಕೊಳ್ಳುವ ಅವಶ್ಯಕತೆಯಿದೆ. “ಬಿಸಿ ನೆತ್ತರು ಉಕ್ಕು ಹರೆಯುವ ಮುನ್ನ ಕಟ್ಟುವೇವು ನಾವು ಹೊಸ ನಾಡೊಂದನ್ನು” ಎನ್ನುವ ಹಾಡಿನಂತೆ ನಮ್ಮ ಯುವಕರ ಸೇವೆ ಈ ದೇಶಕ್ಕೆ ಅತ್ಯಂತ ಅವಶ್ಯಕತೆಯಿದೆ.

ಇಂದು ಭಾರತದ ಪ್ರತಿ ಕ್ಷೇತ್ರದಲ್ಲಿ ಯುವಕರನ್ನು ತೊಡಗಿಸಿ ಈ ದೇಶದ ಅಭಿವೃದ್ಧಿಯತ್ತ ಕೊಂಡೊಯ್ಯಬೇಕಿದೆ. ಶಿಕ್ಷಣ ಕ್ಷೇತ್ರದಲ್ಲಿ ಯುವಕರ ಹುಮ್ಮಸ್ಸು ಹೊರಹಾಕಬೇಕಿದೆ. ಮನಬಿಚ್ಚಿ ದುಡಿಯುವ ಯುವ ಶಿಕ್ಷಕರ ನೇಮಕಕ್ಕೆ ಸರಕಾರ ಕ್ರಮ ಕೈಗೊಳ್ಳಬೇಕಿದೆ. ಯುವಜನಾಂಗವನ್ನು ಕಡೆಗಣಿಸದೇ ಅವರಲ್ಲಿ ಯುವಚೇತನವನ್ನು ತುಂಬಿ ಈ ದೇಶದ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳಬೇಕಿದೆ. ಯುವ ಶಿಕ್ಷಕ, ಆರಕ್ಷಕ, ರಾಜಕಾರಣಿ, ವೈದ್ಯ, ಇಂಜಿನಿಯರ, ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ಯುವಶಕ್ತಿ ಬಳಕೆಯಾಗಬೇಕಿದೆ. ಪುರಾತನ ಕಾಲದಿಂದಲೂ ಯುವಕರು ಈ ದೇಶದ ಚಿಂತಕರು ಎಂದು ಹೇಳಲಾಗಿದೆ. ಗುಡ್ಡ ಬೆಟ್ಟ ಏರಿ ಸಾಧನೆ ಮಾಡಿರುವುವುದು ಇತಿಹಾಸ ಯುವಕರ ಪಡೆಗೆ ಇದೆ. ಅದನ್ನು ಇಂದಿನ ಭಾರತವನ್ನು ಕಟ್ಟುವಲ್ಲಿ ಬಳಸಿಕೊಳ್ಳಬೇಕಾದ ಅಗತ್ಯವಿದೆ.

ಸಂತೋಷದ ವಿಷಯವೇನೆಂದರೆ ವಿಶ್ವದಲ್ಲೇ ಭಾರತ ಅತಿ ಹೆಚ್ಚು ಯುವಜನಾಂಗವನ್ನು ಹೊಂದಿದೆ. ಈ ರಾಷ್ಟ್ರ ಅತ್ಯಂತ ಯುವಕನಾಗಿದೆ. ಈ ದೇಶದಲ್ಲಿ 10ರಿಂದ 24 ವರ್ಷದೊಳಗಿನ ಬರೋಬ್ಬರಿ 35.6 ಕೋಟಿ ಯುವಕರು ವಾಸಿಸುತ್ತಿದ್ದಾರೆ ಎಂದು ವಿಶ್ವಸಂಸ್ಥೆಯ ವರದಿ ಮಾಡಿದೆ. ಈ ವರದಿಯಿಂದ ನಮ್ಮ ದೇಶವು ಎಷ್ಟು ಯಂಗ್  ಆಗಿದೆ ಎಂಬ ಮಾಹಿತಿ ಅರ್ಥವಾಗುತ್ತದೆ. ಭಾರತದ ಜನಸಂಖ್ಯೆಯ ಪೈಕಿ ಶೇ. 28ರಷ್ಟು ಜನರು ಯುವಕರೇ ತುಂಬಿದ್ದಾರೆ. ದೇಶದ ಆರ್ಥಿಕ ಪ್ರಗತಿಯಲ್ಲಿ ಯುವಕರು ಮಹತ್ವದ ಪಾತ್ರ ವಹಿಸುತ್ತಿದ್ದಾರೆ. ಹೆಚ್ಚಿನ ಯುವಕರನ್ನು ಹೊಂದಿರುವ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಅವರ ಶಿಕ್ಷಣ ಹಾಗೂ ಆರೋಗ್ಯಕ್ಕೆ ಹೆಚ್ಚಿನ ಹೂಡಿಕೆ ಮಾಡಿದರೆ, ಆರ್ಥಿಕ ಏಳಿಗೆಯನ್ನು ಕಾಣುತ್ತವೆ ಎಂದು ವರದಿ ತಿಳಿಸಿದೆ.

ಇಲ್ಲಿ ಹೆಣ್ಣು ಗಂಡೆಂಬ ಬೇಧ-ಬಾವ ಅರೆಯದೇ ಎಲ್ಲರೂ ಸಮಾನರು ಎಂಬ ಭಾವವಿದೆ. ಎಲ್ಲರ ಜೀವ ದೇಶದ ಅಭಿವೃದ್ದಿಯೆತ್ತಯಿದೆ. ಇಲ್ಲಿ 10-24 ವರ್ಷದ ವಯೋಮಾನದ 180 ಕೋಟಿ

ಯುವಕರು ವಿಶ್ವದಲ್ಲಿದ್ದಾರೆ. ಆ ಪೈಕಿ 10ರಲ್ಲಿ 9 ಮಂದಿ ಯುವಕರು ಬಡ ದೇಶಗಳಲ್ಲಿ ಇದ್ದಾರೆ. ಯುವಕರ ದೇಶಗಳು ಭಾರತ 35.6 ಕೋಟಿ ಇದೆ ಎಂಬ ವರದಿ ನಿಜಕ್ಕೂ ಹೆಮ್ಮೆ ತರುತ್ತದೆ.

“ಏಳಿ ಎದ್ದೇಳಿ ಯುವಕರೆ ಗುರಿ ಮುಟ್ಟುವತನಕ ನಿಲ್ಲದಿರಿ” ಇದು ವಿವೇಕವಾಣಿಯಾಗಿದೆ. ಈ ಪವಿತ್ರ ಭೂಮಿಯಲ್ಲಿ ಹುಟ್ಟಿದ ಯುವಕರೆಲ್ಲ ಈ ನೆಲದ ಬಗ್ಗೆ ಅಭಿಮಾನವಿರಬೇಕು. ಈ ಮಣ್ಣಿಗೆ ನಾವೆಲ್ಲ ಋಣಿಯಾಗಿರಬೇಕು. “ದೇಶ ನನಗೇನು ಮಾಡಿದೆ ಎನ್ನುವುದಕ್ಕಿಂತ, ದೇಶಕ್ಕಾಗಿ ನಾನೇನು ಮಾಡಿದೆ” ಎಂದು ಎಲ್ಲರೂ ಯೋಚಿಸಬೇಕು. ಪ್ರಸ್ತುತ ಭಾರತದಲ್ಲಿ ತಲೆಯೆತ್ತಿರುವ ಯುವಕರ ಹಲವಾರು ಸಮಸ್ಯೆಗಳಿಗೆ ಯುವಕರಿಂದಲೇ ಪರಿಹಾರ ಹುಡುಕುವ ಪ್ರಯತ್ನಗಳು ಆಗಬೇಕಿದೆ.

ಸಮಾಜಕ್ಕಾಗಿ ಮೀಸಲಿಟ್ಟರೆ ಸಾಕು ಅಬ್ದುಲ್ ಕಲಾಂ ರ 2020ರ ಭಾರತದ ಕನಸು ಖಂಡಿತವಾಗಿಯೂ ನನಸಾಗುತ್ತದೆ. ಇದೆಲ್ಲದಕ್ಕೂ ಮೊದಲು ನಮ್ಮಲ್ಲಿ ದೇಶಭಕ್ತಿ ಜಾಗೃತವಾಗಬೇಕು. ನನ್ನ ದೇಶ, ನನ್ನ ಜನ,ನನ್ನ ಸಮಾಜ ಎಂಬ ಭಾವನೆ ಎಲ್ಲರಲ್ಲೂ ಮೂಡಬೇಕು. ಹಿಂದೂ ಮುಸ್ಲಿಂ ಕ್ರಿಸ್ಚಿಯನ್ ಜೈನ ಬೌದ್ಧ ಎಂಬ ಧರ್ಮ ಸಂಕೋಲೆಗಳಿಂದ ಹೊರ ಬಂದು ನಾವೆಲ್ಲರೂ ಭಾರತೀಯರು ಎಂಬ ಒಂದೇ ಧರ್ಮದಡಿ ಸೇರಬೇಕು. ತಾಯಿ ಭಾರತಾಂಬೆಯ ಪಾದಕ್ಕೆನಮ್ಮನ್ನು ಅರ್ಪಿಸಿಕೊಂಡು ಅವಳ ಸೇವೆಗೆ ಕಂಕಣ ಬದ್ಧರಾಗೋಣ. ಇಡೀ ಪ್ರಪಂಚವೇ ಸಹಾಯಕ್ಕಾಗಿ ನಮ್ಮತ್ತ ಕೈ ಚಾಚುವಂತಹ ಜಗದ್ಗುರು ಭಾರತವನ್ನು ನಿರ್ಮಾಣ ಮಾಡಿ ನಮ್ಮ ಸನಾತರಿಗೆ ಗೌರವ ಸಲ್ಲಿಸೋಣ.......

||ಜೈ ಹಿಂದ್|| |ಜೈ ಕರ್ನಾಟಕ|

ಶ್ರೀಮತಿ ರೇಣುಕಶಿವರಾಜ್
(ಕನ್ನಡ
ಶಿಕ್ಷಕಿ)